ಈ) ಅನ್ವಯಿಸುವುದಿಲ್ಲ.

2739 (3570) : ಶ್ರೀ ಅಂಗಾರ್ ಎಸ್. (ಸುಳ್ಯ) – ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವವರೇ ?

ಅ) ರಾಜ್ಯದಲ್ಲಿರುವ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಬೀಡಿ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು ಹಾಗೂ ಇವರ ಸಮಸ್ಯೆಗಳನ್ನು ಬಗೆ ಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಇ) ಬೀಡಿ ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರ ಕಳೆದ 3 ವರ್ಷಗಳಿಂದ ಬಿಡುಗಡೆ ಮಾಡಿರುವ ಹಣ ಎಷ್ಟು ?

ಈ) ಈ ಹಣದಿಂದ ಕೈಗೆತ್ತಿಕೊಂಡಿರುವ ಯೋಜನೆಗಳು ಯಾವುವು ?

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು)–

ಅ) ದಿ : 31.12.2004ರ ಅಂತ್ಯಕ್ಕೆ ಇರುವ ಬೀಡಿ ಕಾರ್ಮಿಕರ ಸಂಖ್ಯೆ 2,87,062 (ಜಿಲ್ಲಾವಾರು ವಿವರಗಳನ್ನು ಅನುಬಂಧ ಆ ರಲ್ಲಿ ಲಗತ್ತಿಸಿದೆ).

1) ವಾರದಲ್ಲಿ ಆರು ದಿನಗಳ ಕೆಲಸ ಸಿಗುತ್ತಿಲ್ಲ

2) ಗುಣಮಟ್ಟದ ಎಲೆಗಳ ಸರಬರಾಜು ಆಗುತ್ತಿಲ್ಲ.

3) ಕಳಪೆ ಎಲೆಗಳ ಸರಬರಾಜು ಮಾಡಲಾದ ಕಾರಣ ಗುಣಮಟ್ಟದ ಬೀಡಿ ತಯಾರಾಗದೆ ತಿರಸ್ಕರಿಸಲಾಗುತ್ತದೆ. ಈ ರೀತಿ ತಿರಸ್ಕರಿಸಿದ ಕಾರಣ ಕಾರ್ಮಿಕರಿಗೆ ಕಡಿಮೆ ವೇತನ ಸಿಗುತ್ತಿದೆ.

ಬೀಡಿ ಉದ್ಯಮ ಮತ್ತು ಕಾರ್ಮಿಕರ ಸ್ಥಿತಿಗತಿಗಳ ಬಗ್ಗೆ ಸಮಗ್ರ ಅಧ್ಯಯನ ನಡೆಸಿ ಇನ್ಸ್‌ಟ್ಯೂಟ್ ಆಫ್ ಸೋಷಿಯಲ್ ಅಂಡ್ ಎಕಾಮಿಕ್ ಚೇಂಜ್ (ISEC) ಬೆಂಗಳೂರು, ಸಂಸ್ಥೆ ವರದಿ ಸಲ್ಲಿಸಿದೆ. ವರದಿಯನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಇ) ರೂ. 3,00,662/–

ಈ) ಈ ಹಣದಿಂದ ಆರೋಗ್ಯ, ವಸತಿ, ಶಿಕ್ಷಣ, ಮತ್ತು ಮನರಂಜನೆ ಯೋಜನೆಗಳನ್ನು ಕೈಗೊಂಡಿದೆ.